## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೃಷ್ಣಮೂರ್ತಿ, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಶಿವಮೊಗ್ಗ, ಮತ್ತಿತರರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸುವ ಕುರಿತು.

ಓದಲಾಗಿದೆ: 1. ಮಾನ್ಯ ಉಪಲೋಕಾಯುಕ್ತರು, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರಡಿ ಸಲ್ಲಿಸಿರುವ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್//ಬಿಡಿ-6374/2014/ಸನಿಕಾಸ-1, ದಿನಾಂಕ: 06.12.2016

2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಅ.ಸ.ಪತ್ರ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-6374/2014/ಎಆರ್‌ಎಲ್ಒ-1, ದಿನಾಂಕ: 04.02.2017.

****

ಪ್ರಸ್ತಾವನೆ:

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರು ಮೇಲೆ ಓದಲಾದ(2)ರಲ್ಲಿ ಓದಲಾದ ಪತ್ರದೊಂದಿಗೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರವರು ಮೇಲೆ(1) ರಲ್ಲಿ ಓದಲಾದಂತೆ ನೀಡಿರುವ ವರದಿ ಹಾಗೂ ಇತರ ದಾಖಲೆಗಳನ್ನು ಸರ್ಕಾರಕ್ಕೆ ಕಳುಹಿಸಿ, ಸದರಿ ವರದಿಯಲ್ಲಿನ ಶಿಫಾರಸ್ಸಿನಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ತಿಳಿಸುವಂತೆ ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರವರ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿದೆ. ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಆರೇನಕೊಪ್ಪ ಗ್ರಾಮದ ನಿವಾಸಿಯಾದ ಶ್ರೀಮತಿ ರೂಖಿಯಾ ಭೀ ಕೋಂ ಮೊಹಮ್ಮದ್ ಖಾನ್, ಇವರಿಗೆ ದಿನಾಂಕ: 15.12.1983 ರಂದು ಖಾತೆ ನಂ.84ರ 11x11 ಗಜ ವಿಸ್ತೀರ್ಣದ ಖಾಲಿ ನಿವೇಶನವು ಮಂಜೂರಾಗಿದ್ದು, ಸದರಿ ನಿವೇಶನಕ್ಕೆ ಸರ್ಕಾರ ವಿಧಿಸಿದ ಹಣವನ್ನು ಪಾವತಿಸಿದ್ದು, 1988-89ನೇ ಸಾಲಿನಲ್ಲಿ ಹಾರನಹಳ್ಳಿ ಗ್ರಾಮ ಪಂಚಾಯತ್‌ರವರು ಸದರಿ ನಿವೇಶನದ ಖಾತೆಯನ್ನು ದೂರುದಾರರ ತಾಯಿಯ ಹೆಸರಿನಲ್ಲಿ ನೊಂದಾಯಿಸಿದ್ದಾರೆ. ಅಂದಿನಿಂದ ಇಲ್ಲಿಯವರೆಗೂ ತಾವು ಸದರಿ ಸ್ವತ್ತಿನ ತೆರಿಗೆಯನ್ನು ಪಾವತಿಸಿಕೊಂಡು ಬರುತ್ತಿದ್ದು, ಅದು ತಮ್ಮ ಸ್ವಾಧೀನಾನುಭವದಲ್ಲಿದೆ. ಸದರಿ ಖಾಲಿ

ನಿವೇಶನದಲ್ಲಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಮತ್ತು ಸಾಲವನ್ನು ಪಡೆಯುವುದಕ್ಕಾಗಿ ದೂರುದಾರರ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಕೊಡುವಂತೆ ಹಾಗೂ ಸದರಿ ಸ್ವತ್ತಿನ ಸ್ಥಳ ತನಿಖೆ ಮಾಡಿ, ಚೆಕ್‌ಬಂದಿ ದೃಢೀಕರಣ ಪತ್ರವನ್ನು ಕೊಡುವಂತೆ ದೂರುದಾರರು ಹಲವಾರು ಬಾರಿ ಈ ಕೆಳಕಂಡ 1 ರಿಂದ 5ನೇ ಎದುರುದಾರರಗಳನ್ನು ಕೋರಿಕೊಂಡರೂ ಸಹ ಅವರು ದೂರುದಾರರಿಗೆ ಸ್ವತ್ತು 84ರ ಚೆಕ್ಕುಬಂದಿ ದೃಢೀಕರಣ ಪತ್ರವನ್ನು ಕೊಟ್ಟಿಲ್ಲ. ದೂರುದಾರರ ಖಾತೆ ನಂ. 84ರ ಖಾಲಿ ನಿವೇಶನದಲ್ಲಿ ಶ್ರೀ ವಿಘ್ನೇಶ್ವರ ಚಾರಿಟೆಬಲ್ ಟ್ರಸ್ಟ್‌ನವರು ಅತಿಕ್ರಮ ಪ್ರವೇಶ ಮಾಡಿ 2013 ರಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸಿದ ಬಗ್ಗೆ ದೂರುದಾರರು ಸದರಿ ಗ್ರಾಮ ಪಂಚಾಯತಿಗೆ ಮತ್ತು ಕುಂಸಿ ಪೋಲಿಸ್ ಠಾಣೆಗೆ ದೂರು ನೀಡಿದರೂ ಸಹ ಸದರಿ ಗ್ರಾಮಪಂಚಾಯತ್‌ರವರು ದೂರುದಾರರ ಖಾತ ನಂ. 84 ರಲ್ಲಿ ಸದರಿ ಟ್ರಸ್ಟ್‌ನವರು ಗಣಪತಿಯನ್ನು ಪ್ರತಿಷ್ಠಾಪಿಸಲ್ಲವೆಂದು, ಆದರೆ ಗ್ರಾಮ ಪಂಚಾಯತ್‌ಗೆ ಸೇರಿದ ಖಾತೆ ನಂ. 58 ರಲ್ಲಿ ಪ್ರತಿಷ್ಠಾಪಿಸಿರುತ್ತಾರೆಂದು ಸುಳ್ಳು ಮಾಹಿತಿಯನ್ನು ಕೊಟ್ಟಿದ್ದಾರೆ. ಸದರಿ ಖಾತೆ ನಂ. 58ರ ಸ್ವತ್ತು ಆರೇನಕೊಪ್ಪ ಗ್ರಾಮದ ಇಂಜಿಯಾಜ್ ಎಂಬುವವರ ಪಿತ್ರಾರ್ಜಿತ ಸ್ವತ್ತಾಗಿದ್ದು, ಅದನ್ನು ಈಗ ಗ್ರಾಮ ಪಂಚಾಯತ್‌ಗೆ ಸೇರಿತ್ತೆಂದು ದಾಖಲೆಗಳಲ್ಲಿ ಪಂಚಾಯತ್‌ರವರು ನಮೂದಿಸಿದ್ದಾರೆ. ಆದ್ದರಿಂದ, ದೂರುದಾರರ ಖಾಲಿ ನಿವೇಶನದ ಖಾತೆ ನಂ. 84ರ ಚೆಕ್ಕುಬಂದಿ ದೃಢೀಕೃಣ ಪತ್ರವನ್ನು ಕೊಡಿಸುವಂತೆ, ಎದುರುದಾರರಿಗೆ ಆದೇಶಿಸುವಂತೆ, ಶಿವಮೊಗ್ಗ ಜಿಲ್ಲೆಯ ಹಾರನಹಳ್ಳಿ ಅಂಚೆ ಆರೇನಕೊಪ್ಪ ಗ್ರಾಮದ ಶ್ರೀ ಉಬೇದುಲ್ಲಾ ಖಾನ್ ಬಿನ್ ಕೆ.ಮೊಹಮ್ಮದ್ ಖಾನ್, ಇವರು ನೀಡಿದ್ದ ದೂರುನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರನ್ವಯ ತನಿಖೆಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆಂದು ಮಾನ್ಯ ಉಪಲೋಕಾಯುಕ್ತರು-2 ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ.

| ಕ್ರ.ಸಂಖ್ಯೆ: | ಅಧಿಕಾರಿಯ ಹೆಸರು ಮತ್ತು ಪದನಾಮ | ಎದುರುದಾರರ ಸಂಖ್ಯೆ: |
|---|---|---|
| 1 | ಶ್ರೀಮತಿ ಪರ್ವಿನ್ ತಾಜ್,<br>ಹಿಂದಿ ಅಧ್ಯಕ್ಷರು,<br>ಹಾರನಹಳ್ಳಿ ಗ್ರಾಮಪಂಚಾಯತಿ. | 1 |
| 2 | ಶ್ರೀ ಶೀ.ಕೆ.ಸುರೇಶ್<br>ಹಿಂದಿನ ಅಧ್ಯಕ್ಷರು,<br>ಹಾರನಹಳ್ಳಿ ಗ್ರಾಮಪಂಚಾಯತಿ. | 2 |
| 3 | ಶ್ರೀ ಪಿ.ಸಿ.ರುದ್ರಸ್ವಾಮಿ,<br>ಪಂಚಾಯತಿ ಅಭಿವೃದ್ಧಿ ಅಧಿಕಾರಿ,<br>ಹಾರನಹಳ್ಳಿ ಗ್ರಾಮಪಂಚಾಯತಿ | 3 |

| | | |
|---|---|---|
| 4 | ಶ್ರೀ ನಾಗರಾಜ, ಕಾರ್ಯದರ್ಶಿ, ಹಾರನಹಳ್ಳಿ ಗ್ರಾಮ ಪಂಚಾಯತಿ. | 4 |
| 5 | ಶ್ರೀ ಕೃಷ್ಣಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಶಿವಮೊಗ್ಗ. | 5 |

ದೂರುದಾರರ ದೂರಿನ ಬಗ್ಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿ 1 ರಿಂದ 5ನೇ ಎದುದುರಾರರುಗಳು ತಮ್ಮ ಆಕ್ಷೇಪಣೆಯಲ್ಲಿ ಈ ಕೆಳಕಂಡಂತೆ ತಿಳಿಸಿತ್ತಾರೆಂದು ವರದಿಸಲಾಗಿದೆ.

ಹಾರನಹಳ್ಳಿ ಗ್ರಾಮ ಪಂಚಾಯತ್ ದಾಖಲೆಗಳ ಪ್ರಕಾರ ತೆರಿಗೆ ನಿರ್ಧರಣಾ ಪಟ್ಟಿ ನಮೂನೆ-11ರ ಪ್ರಕಾರ ಖಾತೆ ಸಂ;84 ರಲ್ಲಿ ದೂರುದಾರರ ತಾಯಿ ಶ್ರೀಮತಿ ರುಖಿಯಾ ಬೀ ಕೋಂ ಮಹಮ್ಮದ್ ಖಾನ್ ಎಂಬುವವರ ಮನೆ ಎಂದು ದಾಖಲಾಗಿದೆ. ದಿನಾಂಕ: 01.07.2014 ರಂದು ಸ್ಥಳ ಮಹಜರ್ ಮಾಡಿದಾಗಲೂ ಸಹ ಅದು ಮಂಗಳೂರು ಹಂಚಿನ ಮನೆಯಾಗಿದ್ದು, ಅದರಲ್ಲಿ ದೂರುದಾರರ ತಾಯಿ ಶ್ರೀ ರುಖಿಯಾ ಬೀ ರವರು ವಾಸವಾಗಿದ್ದಾರೆ. ಆದ್ದರಿಂದ, ದೂರುದಾರರು ಹೇಳಿರುವ ಪ್ರಕಾರ ಖಾತೆ ಸಂ. 84 ಖಾಲಿ ನಿವೇಶನವಾಗಿರದೇ, ವಾಸದ ಮನೆಯಾಗಿರುತ್ತದೆಂದು ಹೇಳಿದ್ದಾರೆ.

ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಶಿವಮೊಗ್ಗ ಜಿಲ್ಲೆಯ ಕರ್ನಾಟಕ ಲೋಕಾಯುಕ್ತ ಆರಕ್ಷಕ ಉಪಾಧೀಕ್ಷಕರಿಗೆ ಕೇಳಲಾಗಿ, ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ, ಇವರು ತನಿಖೆ ಕೈಗೊಂಡು ಸಲ್ಲಿಸಿದ್ದ ವರದಿಯಲ್ಲಿ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ ಎಂದು ವರದಿಸಿರುತ್ತಾರೆ.

ದೂರುದಾರರ ತಂದೆ ಶ್ರೀ ಮಹಮ್ಮದ್ ಖಾನ್, ರವರು ಸರ್ಕಾರಿ ನೌಕರಿಯಲ್ಲಿದ್ದು, ಸದರಿಯವರು ದಿನಾಂಕ: 08.01.1977 ರಂದು ಅವರ ಪತ್ನಿ ಶ್ರೀಮತಿ ರೂಖಿಯಾ ಭೀ, ರವರ ಹೆಸರಿನಲ್ಲಿ ಆರೇನಕೊಪ್ಪ ಗ್ರಾಮದ ನಿವೇಶನ ಸಂಖ್ಯೆ: 77ನ್ನು ಹಾರನಹಳ್ಳಿ ಮಂಡಲ ಪಂಚಾಯತಿಯಿಂದ 30x50 ಅಡಿ ಮನೆಗಳ ಮಂಜೂರು ದೃಢೀಕರಣ ಪತ್ರವನ್ನು ಪಡೆದು ನಿವೇಶನವನ್ನು ಸ್ವಾಧೀನಕ್ಕೆ ಪಡೆದುಕೊಂಡಿರುವುದು ಕಂಡು ಬಂದಿದೆ. ಸದರಿ ಸ್ವತ್ತಿನಲ್ಲಿ

1970ರಲ್ಲಿ ಮನೆ ನಿರ್ಮಾಣ ಮಾಡಿಕೊಂಡು ವಿದ್ಯುತ್ತ ಸಂಪರ್ಕ ಪಡೆದು ವಾಸವಾಗಿದ್ದಾರೆ. ಅದೇ ರೀತಿ ದೂರುದಾರರ ತಂದೆ 1983 ರಲ್ಲಿ ಪುನ: ಹಾರನಹಳ್ಳಿ ಗ್ರಾಮ ಪಂಚಾಯತಿಯ ಆರೇನಕೊಪ್ಪ ಗ್ರಾಮದಲ್ಲಿ ತನ್ನ ಪತ್ನಿ ಶ್ರೀಮತಿ ರೂಖಿಯಾ ಭೀ ರವರ ಹೆಸರಿನಲ್ಲಿ ನಿವೇಶನ ಸಂ.84ರ ವಿಸ್ತೀರ್ಣ 11x11 ಗಜದ ನಿವೇಶನವನ್ನು ಮಂಜೂರು ಮಾಡಿಕೊಂಡಿದ್ದು, ದಿನಾಂಕ: 15.12.1983 ರಂದು ಪಂಚಾಯತಿಯಿಂದ ಮನೆದಳ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಪರಿಶೀಲಿಸಲಾಗಿ, ಪೂರ್ವಕ್ಕೆ ಪಿಪಿ ರಸ್ತೆ, ಪಶ್ಚಿಮಕ್ಕೆ ಹಿಡುವಳಿದಾರರ ಜಮೀನು, ದಕ್ಷಿಣಕ್ಕೆ ಪಂಚಾಯತ್ ಡಾಗ್ ರಸ್ತೆ, ಉತ್ತರಕ್ಕೆ 12 ಅಡಿ ಬಿಟ್ಟಿರುವ ಬಾಪಿಯ ದಾರಿ ಇದೆ. ದೂರುದಾರರ ತಾಯಿ ಹೆಸರಿನಲ್ಲಿರುವ ನಿವೇಶನ ಸಂಖ್ಯೆ: 84ರ ವಿಸ್ತೀರ್ಣ 11x11 ಗಜದ ಸ್ವತ್ತಿನ ಬಗ್ಗೆ ದಾಖಲೆ ನೀಡುವಂತೆ ಎದುರುದಾರರನ್ನು ಕೇಳಲಾಗಿ, ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಬಗ್ಗೆ 5ನೇ ಎದುರುದಾರರು ಲೋಕಾಯುಕ್ತ ಸಂಸ್ಥೆಗೆ ಹಾರನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ವರದಿ ಆಧರಿಸಿ, ಸಲ್ಲಿಸಿದ ವರದಿಯಲ್ಲಿ ನಿವೇಶನ ಸಂ. 80 ರಲ್ಲಿ ದೂರುದಾರರ ತಾಯಿ ಮನೆ ನಿರ್ಮಿಸಿಕೊಂಡು ವಾಸವಿರುವುದಾಗಿ ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಿದೆ. ಅಲ್ಲದೇ ಸದರಿ ಗ್ರಾಮ ಪಂಚಾಯತನ ಅಭಿವೃದ್ಧಿ ಅಧಿಕಾರಿಯಾದ 3ನೇ ಎದುರುದಾರರು ದೂರುದಾರರ ಅನುಪಸ್ಥಿತಿಯಲ್ಲಿ ಮಹಜರ್ ನಡೆಸಿ ನಿವೇಶನ ಸಂ.77ರ ಚಕ್ಕುಬಂದಿ ನಮೂದಿಸಿ ಸುಳ್ಳು ವರದಿಯನ್ನು 5ನೇ ಎದುರುದಾರರಿಗೆ ನೀಡಿರುವುದು ಕಂಡು ಬಂದಿದೆ. ಸದರಿ ಗ್ರಾಮ ಪಂಚಾಯತ್‌ನ 1988-89ನೇ ಸಾಲಿನ ಕಂದಾಯ ವಸೂಲಿ ಡಿಮ್ಯಾಂಡ್ ವಹಿಯನ್ನು ಪರಿಶೀಲಿಸಲಾಗಿ, ತಾವು ಮಾಡಿರುವ ತಪ್ಪು ಮಾಹಿತಿಯನ್ನು ಸಮರ್ಥನೆ ಮಾಡುವ ಉದ್ದೇಶದಿಂದ ದೂರುದಾರರ ತಾಯಿತಿ ಸಂಬಂಧಪಟ್ಟಂತೆ ಸ್ವತ್ತಿನ ವಹಿಯ ಕೊನೆಯಲ್ಲಿ ನಿವೇಶನ ಸಂ.84 ಎಂದು ಬರೆದು ಮುಂದೆ ಶ್ರೀಮತಿ ರೂಖಿಯಾ ಭೀ ಎಂದು ಬರೆಯುವ ಮೂಲಕ ದಾಖಲೆಗಳನ್ನು ತಿದ್ದುಪಡಿ ಮಾಡಿದ್ದಾರೆ. ಕಾರಣ, ದೂರುದಾರರ ತಾಯಿ ಇವರ ನಿವೇಶನ ಸಂ.84 ವಿಸ್ತೀರ್ಣ 11x11ನ್ನು 1983 ರಲ್ಲಿ ಅಧಿಕೃತವಾಗಿ ಪಡೆದುಕೊಂಡು, ಆ ನಿವೇಶನದಲ್ಲಿ ಶ್ರೀ ವಿಘ್ನೇಶ್ವರ ಚಾರಿಟೆಬಲ್ ಟ್ರಸ್ಟ್ ಇವರಿಗೆ ಗಣಪತಿ ಮೂರ್ತಿಯನ್ನು ಸ್ಥಾಪಿಸಲು ಸದರಿ ಗ್ರಾಮ ಪಂಚಾಯತರವರು ಕಾನೂನುಬಾಹಿರವಾಗಿ ಅನುಮತಿ ನೀಡಿರುವುದು ಕಂಡು ಬಂದಿದೆ ಮತ್ತು ಸದರಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ, ಶಿವಮೊಗ್ಗ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಯವರು ಶಾಮೀಲಾಗಿ ನಿವೇಶನ ಸಂ.77ರ ಚಕ್ಕುಬಂದಿಯನ್ನು ನಮೂದಿಸಿ, ಅದೇ ನಿವೇಶನ ಸಂ.84 ಆಗಿರುತ್ತದೆಂದು ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಿದೆ.

ತನಿಖಾಧಿಕಾರಿಗಳ ವರದಿಗೆ ಎದುರುದಾರರುಗಳಿಂದ ಉತ್ತರವನ್ನು ಕೇಳಲಾಗಿ, ಎದುರುದಾರರು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲವೆಂದು ವರದಿಸಿರುತ್ತಾರೆ.

**ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತವೆ ಎಂದು ಮಾನ್ಯ ಉಪಲೋಕಾಯುಕ್ತ-2, ರವರು ತಮ್ಮ ವರದಿಯಲ್ಲಿ ನಮೂದಿಸಿರುತ್ತಾರೆ.**

ನಿವೇಶನ ಸಂಖ್ಯೆ: 77ನ್ನು ದೂರುದಾರರ ತಂದೆ ಶ್ರೀ ಮಹಮ್ಮದ್ ಖಾನ್. ಇವರು ದಿನಾಂಕ: 08.01.1977 ರಂದು ತನ್ನ ಪತ್ನಿ ಶ್ರೀಮತಿ ರೂಖಿಯಾ ಭೀ ರವರ ಹೆಸರಿನಲ್ಲಿ ಖರೀದಿಸಿದ್ದು, 1980ನೇ ಸಾಲಿನಲ್ಲಿ ಮನೆ ಕಟ್ಟಿಕೊಂಡು ವಿದ್ಯುತ್ ಸಂಪರ್ಕ ಪಡೆದು ವಾಸವಾಗಿದ್ದಾರೆ. ಅದೇ ರೀತಿ ನಿವೇಶನ ಸಂ.84ನ್ನು ದೂರುದಾರರ ತಂದೆ ಅವರ ಪತ್ನಿಯ ಹೆಸರಿನಲ್ಲಿ 1983 ರಲ್ಲಿ ಖರೀದಿಸಿದ್ದು, ಈ ಬಗ್ಗೆ ದಿನಾಂಕ: 15.12.1983 ರಂದು ಪಂಚಾಯತ್‌ನಿಂದ ಮನೆದಳ ದೃಢೀಕರಣ ಪತ್ರವನ್ನು ಪಡೆದಿದ್ದಾರೆ. 3ನೇ ಎದುರುದಾರರ ವರದಿಯ ಮೇಲೆ 5ನೇ ಎದುರುದಾರರು ಈ ಸಂಸ್ಥೆಗೆ ವರದಿ ನೀಡುವ ಸಂದರ್ಭದಲ್ಲಿ ನಿವೇಶನ ಸಂ.84 ರಲ್ಲಿ ದೂರುದಾರರ ತಾಯಿ ಮನೆ ನಿರ್ಮಿಸಿಕೊಂಡು ವಾಸವಾಗಿರುವುದಾಗಿ ವರದಿ ನೀಡಿದ್ದಾರೆ. ಆದರೆ, ನಿವೇಶನ ಸಂ.84 ಖಾಲಿ ನಿವೇಶನ ಇರುವ ಬಗ್ಗೆ ಕಂಡು ಬಂದಿದೆ. ದೂರುದಾರರ ತಾಯಿ ನಿವೇಶನ ಸಂ.77 ರಲ್ಲಿ ವಾಸವಾಗಿದ್ದಾರೆ. ಆದರೆ, ಸದರಿ ಗ್ರಾಮ ಪಂಚಾಯತ್‌ನ ಸದರಿ ಆಸ್ತಿಗೆ ಸಂಬಂಧಪಟ್ಟ 1988-89ರ ಡಿಮ್ಯಾಂಡ್ ವಹಿಯನ್ನು ಪರಿಶೀಲಿಸಲಾಗಿ, ನಿವೇಶನ ಸಂ.84ರ ಕೊನೆಯಲ್ಲಿ ಶ್ರೀಮತಿ ರೂಖಿಯಾ ಭೀ ಎಂದು ಬರೆಯುವ ಮೂಲಕ ತಿದ್ದುಪಡಿ ಮಾಡಲಾಗಿದೆ. ಆ ನಂತರ, ನಿವೇಶನ ಸಂ.84 ರಲ್ಲಿ ಶ್ರೀ ವಿಘ್ನೇಶ್ವರ ಚಾರಿಟೆಬಲ್ ಟ್ರಸ್ಟ್‌ರವರಿಗೆ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲು 3 ಮತ್ತು 4ನೇ ಎದುರುದಾರರು ಕಾನೂನುಬಾಹಿರವಾಗಿ ಅನುಮತಿ ನೀಡಿದ್ದಾರೆ. ಅಲ್ಲದೇ 3 ರಿಂದ 5ನೇ ಎದುರುದಾರರು ಕಾನೂನುಬಾಹಿರವಾಗಿ ಅನುಮತಿ ನೀಡಿದ್ದಾರೆ. ಅಲ್ಲದೇ 3 ರಿಂದ 5ನೇ ಎದುರುದಾರರು ಷಾಮೀಲಾಗಿ ನಿವೇಶನ ಸಂ.77ರ ಚೆಕ್ಕುಬಂದಿಯನ್ನು ನಿವೇಶನ ಸಂ.84 ರಲ್ಲಿ ನಮೂದಿಸಿ, ಸುಳ್ಳು ಮಾಹಿತಿ ನೀಡಿ ಕರ್ತವ್ಯ ತಿದ್ದುಪಡಿ ಮಾಡಿ, ನಿವೇಶನ ಸಂ. 77ರ ಚಕ್ಕುಬಂದಿಯನ್ನು ನಿವೇಶನ ಸಂ.84 ರಲ್ಲಿ ನಮೂದಿಸಿ ಕಾನೂನು ಬಾಹಿರವಾಗಿ ಶ್ರೀ ವಿಘ್ನೇಶ್ವರ ಚಾರಿಟೆಬಲ್ ಟ್ರಸ್ಟ್‌ರವರಿಗೆ ಗಣಪತಿ ಮೂರ್ತಿಯನ್ನು ಪ್ರತಿಷ್ಠಾಪಿಸಲು ನೀಡಿ ಕರ್ತವ್ಯ ಲೋಪವೆಸಗಿದ್ದಾರೆ.

ಮೇಲ್ಕಂಡ ಅಂಶಗಳು, ಕಡತದ ಸಂಗತಿಳು ಹಾಗೂ ದಾಖಾತಿಗಳನ್ನು, ತನಿಖಾಧಿಕಾರಿಗಳ ವರದಿ ಹಾಗೂ ಎದುರುದಾರರ ಆಕ್ಷೇಪಣೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 3 ರಿಂದ 5ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ ಎಂದು ವರದಿಸಿರುತ್ತಾರೆ. ಹಾಗೂ ಎದುರುದಾರರು 1 ಮತ್ತು 2 ರವರುಗಳು ಗ್ರಾಮಪಂಚಾಯತ್‌ನ ಮಾಜಿ ಅಧ್ಯಕ್ಷರುಗಳಾಗಿದ್ದು, ಸದರಿಯವರ ವಿರುದ್ಧದ ನಡವಳಿಗಳನ್ನು ಕೈಬಿಡಲಾಗಿದೆ ಎಂದು ವರದಿಸಿರುತ್ತಾರೆ.

3 ರಿಂದ 5ನೇ ಎದುರುದಾರರುಗಳು ಸರ್ಕಾರಿ ನೌಕರರಾಗಿ, ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವೆಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಕರ್ನಾಟಕ

ನಾಗರೀಕ ಸೇವಾ (ನಡತೆ) ನಿಯಮಾವಳಿಗಳು 1966ರ ನಿಯಮ 3(i)(ii) (iii)ರನ್ನು ಉಲ್ಲಂಘಿಸಿರುವುದರಿಂದ, ಸದರಿ ಅಧಿಕಾರಿ/ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಪ್ರಕರಣವನ್ನು ತಮಗೆ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 14(ಎ) ರನ್ವಯ ವಹಿಸಿಕೊಡುವಂತೆ ಮಾನ್ಯ ಉಪಲೋಕಾಯುಕ್ತರು ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸನ್ನು ಕಳುಹಿಸಿಕೊಡುತ್ತಾ, ಅಂತೆಯೇ ಕ್ರಮವಹಿಸುವಂತೆ ನಿಬಂಧಕರು, ರವರು ಕೋರಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ವರದಿ ಹಾಗೂ ಅದರೊಂದಿಗಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಎದುರುದಾರರು 3 ರಿಂದ 5 ರವರುಗಳು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವುದು ಕಂಡು ಬರುತ್ತದೆ. ಆದುದರಿಂದ, ಮಾನ್ಯ ಉಪಲೋಕಾಯುಕ್ತರು, ತಮ್ಮ ವರದಿಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾಡಿರುವ ಶಿಫಾರಸ್ಸಿನಂತೆ, ಎದುರುದಾರರು 3 ರಿಂದ 5 ರವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ರನ್ವಯ ವಿವರವಾದ ಇಲಾಖಾ ವಿಚಾರಣೆಯನ್ನು ಜರುಗಿಸಲು ಅದೇ ನಿಯಮಾವಳಿಗಳ ನಿಯಮ 14(ಎ) ರನ್ವಯ, ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರು-I, ಇವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 64 ವಿಸೇಬಿ 2017 ಬೆಂಗಳೂರು, ದಿನಾಂಕ:16-03-2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ, ಈ ಕೆಳಕಂಡ ಅಧಿಕಾರಿ/ನೌಕರರುಗಳ ವಿರುದ್ಧದ ಆರೋಪಗಳ ಸಂಬಂಧ ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 11 ಮತ್ತು 11(ಎ) ರನ್ವಯ ಸಮಗ್ರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಪ್ರಕರಣವನ್ನು ಅದೇ ನಿಯಮಾವಳಿಗಳ ನಿಯಮ-14(ಎ)ರ ಪ್ರಕಾರ ಮಾನ್ಯ ಉಪಲೋಕಾಯುಕ್ತರು-I, ಕರ್ನಾಟಕ ಲೋಕಾಯುಕ್ತ ರವರಿಗೆ ವಹಿಸಿ ಆದೇಶಿಸಿದೆ.

| **ಕ್ರ.ಸಂಖ್ಯೆ:** | **ಅಧಿಕಾರಿಯ ಹೆಸರು ಮತ್ತು ಪದನಾಮ** | **ಎದುರುದಾರರ ಸಂಖ್ಯೆ:** |
|---|---|---|
| 1 | ಶ್ರೀ ಪಿ.ಸಿ.ರುದ್ರಸ್ವಾಮಿ,<br>ಪಂಚಾಯತಿ ಅಭಿವೃದ್ಧಿ ಅಧಿಕಾರಿ,<br>ಹಾರನಹಳ್ಳಿ ಗ್ರಾಮಪಂಚಾಯತಿ | 3 |

| | | | |
|---|---|---|---|
| 2 | ಶ್ರೀ ನಾಗರಾಜ, ಕಾರ್ಯದರ್ಶಿ, ಹಾರನಹಳ್ಳಿ ಗ್ರಾಮ ಪಂಚಾಯತಿ. | 4 | |
| 3 | ಶ್ರೀ ಕೃಷ್ಣಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್ ಶಿವಮೊಗ್ಗ. | 5 | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ

16/03/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ&ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು-1 ಕರ್ನಾಟಕ ಲೋಕಾಯುಕ್ತ, ಬೆಂಗಳೂರು
3) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಶಿವಮೊಗ್ಗ.
4) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-01

ಪ್ರತಿ ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ (ಪಂ.ರಾಜ್)/ ಜಂಟಿ ಕಾರ್ಯದರ್ಶಿ (ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.